ಶ್ರೀ ಬಸವರಾಜ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

01) ಹೌದು.

02) ಸರ್ಕಾರದ ಆದೇಶ ಸಂಖ್ಯೆ : ಅಇ 14 ಎಸ್ಆರ್ಪಿ 2006, ದಿನಾಂಕ : 12–05–2006ರನ್ವಯ ಸರ್ಕಾರಿ ಅನುದಾನಿತ ಮತ್ತು ಸ್ಥಳೀಯ ಸಂಸ್ಥೆಗಳ ಶಾಲಾ ಶಿಕ್ಷಕರಿಗೆ ಮಾಸಿಕ ರೂ.200–00ಗಳ ವಿಶೇಷ ಭತ್ಯೆಯನ್ನು ಮಧ್ಯಂತರ ಪರಿಹಾರವಾಗಿ ದಿನಾಂಕ : 01–04–2006ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿದೆ.

03, 04) 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ಶಿಕ್ಷಕರಿಗೆ ರೂ.200–00ಗಳ ವಿಶೇಷ ಭತ್ಯೆಯನ್ನು ಮಂಜೂರು ಮಾಡಲಾಗಿದೆ. ಇತರರಿಗೆ ಅಂದರೆ ಶಿಕ್ಷಕೇತರ ಸಿಬ್ಬಂದಿಗಳಿಗೆ 5ನೇ ವೇತನ ಆಯೋಗದಲ್ಲಿ ರೂ.200–00ಗಳ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುವುದಿಲ್ಲ. ಆದ್ದರಿಂದ ಶಿಕ್ಷಕೇತರಿಗೆ ಈ ಸೌಲಭ್ಯ ಕಲ್ಪಿಸಿರುವುದಿಲ್ಲ.

1625 (2314) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ಗಾಂಧಿ ವಸತಿ : ಇಂದಿರಾ ಆವಾಸ್ ಯೋಜನೆ ಇದರಲ್ಲಿ ವಸತಿ ಯೋಜನೆಗಾಗಿ ಬಿಡುಗಡೆಯಾಗುವ ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು; (ಜಿಲ್ಲಾವಾರು ವಿಧಾನ ಸಭಾಕ್ಷೇತ್ರಗಳ ಸಹಿತ ವಿವರ ನೀಡುವುದು);

ಆ) ಈ ಅನುದಾನದ ಮೊತ್ತವು ಸಾಕಾಗದೆ ಯೋಜನೆ ಅರ್ಧಕ್ಕೆ ನಿಂತಿರುವ ಪ್ರಕರಣಗಳು ರಾಜ್ಯದಲ್ಲಿ ಎಲ್ಲಾದರೂ ಜರುಗಿವೆಯೆ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು; ಇದಕ್ಕಾಗಿ ಹೆಚ್ಚಿನ ಅನುದಾನ ನೀಡಲಾಗುವುದೇ;

ಇ) ಇಲ್ಲದ್ದಿದ್ದಲ್ಲಿ ಕಾರಣಗಳೇನು;

ಈ) ಮನೆ ಮಂಜೂರಾಗಿ ಕಾಮಗಾರಿ ಪೂರ್ತಿಯಾದ ಮೇಲೆ ಹಣ ಬಿಡುಗಡೆಯಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು;

ಉ) ಸರಿಯಾದ ಸಮಯಕ್ಕೆ ಹಣ ಬಿಡುಗಡೆ ಮಾಡಲು ಇರುವ ತೊಂದರೆ–ಗೊಂದಲಗಳೇನು;

ಊ) ಇದರ ನಿವಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; ಸಂಪೂರ್ಣ ವಿವರ ನೀಡುವುದು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ರಾಜೀವ್ ಗಾಂಧಿ ವಸತಿ ನಿಗಮದಿಂದ ಗ್ರಾಮೀಣ ಆಶ್ರಯ, ಗ್ರಾಮೀಣ ಅಂಬೇಡ್ಕರ್, ನಗರ ಆಶ್ರಯ ಮತ್ತು ಇಂದಿರಾ ಆವಾಸ್ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2005–06 ಮತ್ತು 2006–07ನೇ ಶ್ರೇಣಿಯಡಿಯಲ್ಲಿ ಬಿಡುಗಡೆ ಯಾಗುವ ಮತ್ತು ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಗಿನಂತೆ ನೀಡಲಾಗಿದೆ.

2005–2006 ರೂ.ಲಕ್ಷಗಳಲ್ಲಿ

ಕ್ರ ಸಂ	ಯೋಜನೆ	ಗುರಿ	ಬಿಡುಗಡೆ ಮಾಡಬೇಕಾದ ಅನುದಾನ	ಬಿಡುಗಡೆಯಾದ ಅನುದಾನ
1	ಗ್ರಾಮೀಣ ಆಶ್ರಯ	226080	56520.00	24578.60
2	ನಗರ ಆಶ್ರಯ	50000	12500.00	122.00
3	ಗ್ರಾಮೀಣ ಅಂಬೇಡ್ಕರ್	24040	4808.00	1612.90
4	ಇಂದಿರಾ ಆವಾಸ್	50136	12534.00	12533.79
	ಒಟ್ಟು	**350256**	**86362.00**	**38847.29**

ಅನುದಾನವನ್ನು ಪ್ರಗತಿಗೆ ಅನುಗುಣವಾಗಿ ಪ್ರತಿವಾರ ಬಿಡುಗಡೆ ಮಾಡಲಾಗುತ್ತಿದೆ.

2006–2007 ರೂ.ಲಕ್ಷಗಳಲ್ಲಿ

ಕ್ರ ಸಂ	ಯೋಜನೆ	ಗುರಿ	ಬಿಡುಗಡೆ ಮಾಡಬೇಕಾದ ಅನುದಾನ	ಬಿಡುಗಡೆಯಾದ ಅನುದಾನ
1	ಗ್ರಾಮೀಣ ಆಶ್ರಯ	340560	85140.00	
2	ನಗರ ಆಶ್ರಯ	ಗುರಿ ನಿಗದಿ ಪಡಿಸಿರುವುದಿಲ್ಲ.		
3	ಗ್ರಾಮೀಣ ಅಂಬೇಡ್ಕರ್	ಗುರಿ ನಿಗದಿ ಪಡಿಸಿರುವುದಿಲ್ಲ.		
4	ಇಂದಿರಾ ಆವಾಸ್	53299	13324.880	9818.20
	ಒಟ್ಟು	**393859**	**98464.9**	**9818.20**

* ಗ್ರಾಮೀಣ ಆಶ್ರಯ 2006–07ನೇ ಶ್ರೇಣಿಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಗತಿಯಲ್ಲಿದ್ದು, ಪ್ರಕ್ರಿಯೆ ಮುಕ್ತಾಯವಾದ ಕೂಡಲೇ ಅನುದಾನ ಬಿಡುಗಡೆ ಮಾಡಲಾಗುವುದು.

ತಾಲ್ಲೂಕುವಾರು ವಿವರ ಅನುಬಂಧ "ಅ" ದಲ್ಲಿ ನೀಡಲಾಗಿದೆ. (ಹೆಚ್ಚಿನ ಪುಟಗಳು ಇರುವುದರಿಂದ ಮಾನ್ಯ ಸದಸ್ಯರಿಗೆ ಮಾತ್ರ ನೀಡಲಾಗಿದೆ)

ಆ, ಇ) ಯೋಜನೆಯಡಿಯಲ್ಲಿ ನೀಡಲಾಗುವ ಅನುದಾನವು ಕೇವಲ ಘಟಕ ಸಹಾಯವಾಗಿದ್ದು, ಉಳಿದ ಅನುದಾನವನ್ನು ಫಲಾನುಭವಿಗಳು ತಮ್ಮ ಸ್ವಂತ ವಂತಿಕೆ ಮತ್ತು ಸ್ಥಳೀಯವಾಗಿ ಲಭ್ಯವಿರುವ ನಿರ್ಮಾಣ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ತಮ್ಮ ಮನೆಗಳನ್ನು ನಿರ್ಮಿಸಿಕೊಳ್ಳಬೇಕಾಗಿರುತ್ತದೆ.

ಗ್ರಾಮೀಣ ಆಶ್ರಯ ಯೋಜನೆಯಲ್ಲಿ ಪ್ರತಿ ಮನೆಯ ಘಟಕ ಸಹಾಯವನ್ನು ರೂ.20,000/– ರಿಂದ 25,000/– ಕ್ಕೆ ಹೆಚ್ಚಿಸಲಾಗಿದೆ.

ಈ) ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಾಧಿಸಿರುವ ಪ್ರಗತಿಯನ್ನು ಪ್ರತಿ ವಾರ ನಿಗಮದ ವೆಬ್‌ಸೈಟಿನಲ್ಲಿ ನಮೂದಿಸಲು ಅವಕಾಶ ನೀಡಲಾಗಿದ್ದು, ಈ ವರದಿಗೆ ಅನುಗುಣವಾಗಿ ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ನೇರವಾಗಿ ಗ್ರಾಮ ಪಂಚಾಯತಿಗಳಿಗೆ ಪ್ರತಿವಾರ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

ಊ) ಕೇಂದ್ರ ಪುರಸ್ಕೃತ ಇಂದಿರಾ ಆವಾಸ್ ಯೋಜನೆಯಡಿ ಆರ್ಥಿಕ ವರ್ಷದಲ್ಲಿ ನಿಯಮಾನುಸಾರ ಶೇ.90ಕ್ಕಿಂತ ಕಡಿಮೆ ಸಾಧಿಸಿದಲ್ಲಿ ಅನುದಾನ ಬಿಡುಗಡೆಯಲ್ಲಿ ಕಡಿತಗೊಳಿಸಲಾಗುವುದು.

1626 (2110) ಶ್ರೀ ಸಂಗಮೇಶ್ವರ ಬಿ.ಕೆ (ಭದ್ರಾವತಿ) :– ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾವತಿ ತಾಲ್ಲೂಕಿನ ಭದ್ರಾ ಡ್ಯಾಂನ ಆವರಣದಲ್ಲಿ ಬೃಂದಾವನ ಪಾರ್ಕ್ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರೂ ಸಹ ಇನ್ನೂವರೆಗೂ ಪಾರ್ಕ್ ನಿರ್ಮಿಸದಿರಲು ಕಾರಣಗಳೇನು;

ಆ) ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪರಿಶೀಲನೆಯಾದ ನಂತರ ನಿರ್ಧರಿಸಲಾಗುವುದು.

1631 (2298) ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ):– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪೂರ ಜಿಲ್ಲೆಯಲ್ಲಿ ಡೋಣಿ ನದಿ ಹರಿದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;